
ಕಥೆ

# ಪಾಕಿಸ್ತಾನದಿಂದ ಬಂದ ಪತ್ರ



**ಮಹಾಂತೇಶ ನವಲಕಲ್**

ಕಲೆ: ವಿಶ್ವನಾಥ್ ಎ.ಎಸ್.



ಕಾಶ್ಮೀರದ ಝೀಲಂ ನದಿಯ ಅನತಿ ದೂರದಲ್ಲಿನ ಈ ರಾತ್ರಿ ಎಂದಿನಂತೆ ಇರಲಿಲ್ಲ. ಅಲ್ಲಿಯ ತೋಟಗಳ ಪ್ಲಮ್ ಪೀಚು ಹಣ್ಣುಗಳು ಕೊಳೆತು, ಮೆಲ್ಲಗೆ ಮದ್ಯವಾಗಿ ಆ ಗಂಧಗಾಳಿಯನ್ನು ಪರಿಸರದ ತುಂಬಾ ಹರಡಿದ್ದವು. ನನ್ನ ಮನಸ್ಸು ಹನ್ನೆರಡನೇ ಶತಮಾನದ ಕಾಶ್ಮೀರದ ಕವಿ ಕಲ್ಹಣ ಮತ್ತು ಆತನ ಗ್ರಂಥ 'ರಾಜತರಂಗಿಣಿ' ಬಗ್ಗೆ ಯೋಚಿಸುತ್ತಿತ್ತು. ಅತನ ಈ ಕಾವ್ಯ ತನ್ನನ್ನು ದೇಶದ್ರೋಹದ ಅಪಾದನೆಗೆ ತಳ್ಳುತ್ತದೆ ಎಂದುಕೊಂಡಿರಲಿಲ್ಲ. ಪಾಕಿಸ್ತಾನದಲ್ಲಿ ಚಾಚಾನಿಗೂ ಗಲ್ಲು ಶಿಕ್ಷೆಯವರೆಗೆ ಆತನನ್ನು ತೆಗೆದುಕೊಂಡು ಹೋಗುತ್ತದೆ ಅಂದುಕೊಂಡಿರಲಿಲ್ಲ.

ದೂರದ ಕಲ್ಬುರ್ಗಿಯಿಂದ ಬಂದ ನನಗೆ ಪಂಜಾಬಿನ ವಾಘಾ ಗಡಿ, ಜಮ್ಮುವಿನ ದೇಶ ವಿಭಾಂತರರೇಖೆ ಮತ್ತು ಕಾಶ್ಮೀರದಲ್ಲಿ ಈಗ ಇರುವ ಮಿಲಿಟರಿ ಕ್ಯಾಂಪ್, ಹೀಗೆ ತಿರುಗಿಣಿಯಂತೆ ತಿರುಗಿ ತಿರುಗಿ ಬಂದುದ್ದು ಒಂದು ಕಡೆಯಾದರೆ, ಈಗ ದೇಶದ್ರೋಹದ ಆಪಾದನೆಯ ದೀವಿಟಿಗೆಗೆ ಮುಖ ಕೊಟ್ಟು ಓಡಾಡುವುದು ಮತ್ತೊಂದು ಕಡೆ. ಈ ಆರು ತಿಂಗಳ ನರಕಸದೃಶ ಕಾಲವನ್ನು ಹೇಗೆ ಕಳೆದೆನೆಂಬುದೇ ಒಂದು ಪವಾಡ.

ಇಲ್ಲಿಂದ ಊರಿಗೆ ಹೋಗುವ ಹಾಗಿಲ್ಲ. ಊರಿಗೆ ದೂರವುಳಿಯಿತು, ಜಮ್ಮುವಿನ ಗಡಿ ದಾಟುವಂತಿಲ್ಲ. ಇಲ್ಲಿ ವಿಚಾರಣೆ ಇದೆ ಮಾತುಗಳಿವೆ, ಸಾಂತ್ವನಗಳಿವೆ, ಆದರೆ ಅಲ್ಲಿ ಪಾಕಿಸ್ತಾನದಲ್ಲಿ ಏನಿದೆ? ಅದೊಂದು ಅಪ್ರಬುದ್ಧ ಜಗತ್ತು, ವಿಚಾರಣೆ ಎಂದರೆ ಸಾವಿನ ಮನೆಯ ಅಂಗಳಕ್ಕೆ ಒಯ್ಯುವುದು ಎಂದರ್ಥ. ಚಾಚಾನೇ ಹೇಳುತ್ತಿದ್ದ, ಮಗನೇ ನನ್ನಪ್ಪ ತೆಗೆದುಕೊಂಡ ತಪ್ಪು ನಿರ್ಧಾರಗಳಲ್ಲಿ ನಾವು ಭಾರತ ಬಿಟ್ಟುಹೋಗಿದ್ದು ಒಂದು. ಅಲ್ಲಿರುವ ಶಾಂತಿ, ನೆಮ್ಮದಿ ಇಲ್ಲಿ ಇರಲು ಸಾಧ್ಯವಿಲ್ಲ. ಭಾರತ ಎಂತಹ ಸುಂದರ ದೇಶ ಎಂದು ವಾಘಾ ಗಡಿಯ ತನ್ನ ದೇಶಕ್ಕೂ ಸೇರದ ಅವನ ದೇಶಕ್ಕೂ ಸೇರದ ಭೂಮಿಯಲ್ಲಿ ನಿಂತು ಹೇಳುತ್ತಿದ್ದಾಗಲೇ ಪಾಕಿಸ್ತಾನದ ಬಾರ್ಡರ್ ಸೆಕ್ಯೂರಿಟಿ ಅಧಿಕಾರಿ, ಚಾಚಾನ ಮುಖಕ್ಕೆ ರಪ್ಪಂತ ಗುದ್ದಿದ್ದ. ಇಂತಹ ಗುದ್ದಿಕೆಗಳು ಬಹು ಸಹಜವೆಂಬಂತೆ ಜೀರ್ಣಿಸಿಕೊಂಡು ಅಂದಿನ ಕೆಲಸ ಕಾರ್ಯಗಳಲ್ಲಿ ಭಾಗವಹಿಸಿದ್ದ ಚಾಚಾ.

ತಾನು ಎಂದೆಂದೂ ನೋಡದ ಚಾಚಾನ ಮಗಳು ಅಕ್ಕ ರಜಿಯಾ, ಚಾಚಾನ ಮೇಲೆ ಸಂಪೂರ್ಣ ಅವಲಂಬಿತಳಾಗಿದ್ದಳು. ಈಗ ಅವಳ ಬದುಕು? ಆಕೆಯ ಆ ಏಳು ಮಕ್ಕಳು? ಕೊನೆಯ ಮಗು ನೂರ್ ಇನ್ನೂ ಒಂದು ವರ್ಷದ ಒಳಗಿನವನು. ಅದೂ ಅಲ್ಲದೆ ಅವಳಿಗೆ